ISSN : 2347 - 5048

# ಅರುಹು ಕುರುಹು

ಸಂಪುಟ : ೧೨
ಸಂಚಿಕೆ : ೪೫
ಜುಲೈ-ಸೆಪ್ಟಂಬರ್ ೨೦೨೧

ಸಾಹಿತ್ಯ ಸಂಸ್ಕೃತಿಯ ಶೋಧದಲ್ಲಿ

ವಿಶೇಷಾಂಕ

## ಸಂಶೋಧನ ಸಂರಚನೆ

ಯುಜಿಸಿ ಕೇರ್ ಪಟ್ಟಿಯಲ್ಲಿರುವ ಮತ್ತು ತಜ್ಞ- ಪರಿಶೀಲಿತ ಕನ್ನಡ ಪತ್ರಿಕೆ
UGC CARE LISTED AND PEER- REVIEWED KANNADA JOURNAL



# ಭಕ್ತಿ ಚಿನ್ನಹ ದಂಡಕ : ಒಂದು ವಿಶ್ಲೇಷಣೆ

ಡಾ ಆರ್ ವಿ ಪಾಟೀಲ

೧೧-೧೨ನೇ ಶತಮಾನ ಸಾಹಿತ್ಯವನ್ನು ಸೃಜನಶೀಲಗೊಳಿಸಿ ಹೊಸ ಮಾರ್ಗಗಳೊಂದಿಗೆ ಭಿನ್ನ ಭಿನ್ನವಾದ ವಿಶಿಷ್ಟ ಸಾಹಿತ್ಯ ಪ್ರಕಾರಗಳು ಹುಟ್ಟಿಕೊಂಡವು. "ದಂಡಕ ಸಾಹಿತ್ಯ ಈ ಕಾಲದ ಶಿವಶರಣರಿಂದಲೇ ಹೊಸ ಸೃಷ್ಟಿಯಾಗಿರುವುದು."[೧] ಶರಣರ ಅನುಭಾವ ತತ್ತ್ವಸಿದ್ಧಾಂತದ ನೆಲೆಗಟ್ಟಿನ ಮೇಲೆ ಅಭಿವ್ಯಕ್ತಿಯಾದ ಸಾಹಿತ್ಯವಾಗಿದೆ. ಇಂತಹ ವಿಭಿನ್ನವಾದ ಮತ್ತೊಂದು ದಂಡಕ ಸಾಹಿತ್ಯ ಇದಾಗಿದೆ. ಈ "ಸಾಹಿತ್ಯವು ನೀಳವಾದ ಅನುಭಾವ ಸಾಹಿತ್ಯ ರಗಳೆಯ ರೂಪವನ್ನು"[೨] ಹೋಲುವುದು.

**ಅರ್ಥ ಸ್ವರೂಪ:** ಕನ್ನಡ ಸಾಹಿತ್ಯ ತನ್ನದೇ ಆದ ಜೀವಂತಿಕೆಯ ಸತ್ವವನ್ನು ಹೊಂದಿದೆ. ಆಯಾ ಕಾಲ ಘಟ್ಟದ ಮೌಲ್ಯಗಳಿಗೆ ತಕ್ಕಂತೆ ಸಾಹಿತ್ಯ ಪ್ರಕಾರಗಳು ಹುಟ್ಟಿಕೊಂಡಿವೆ. ಹಾಗೆ ಹುಟ್ಟಿರುವುದೇ ಈ ದಂಡಕ ಸಾಹಿತ್ಯ. 'ದಂಡಕ'ವೆಂದರೆ ಇದೊಂದು "ಸಂಸ್ಕೃತ ನಾಮಪದವಾಗಿದ್ದು, ಕನ್ನಡ-ಕನ್ನಡ ಶಬ್ದಕೋಶದಲ್ಲಿ ದಂಡಕವೆಂದರೆ ಬಡಿಗೆ, ನೇಗಿಲಿನ ಉದ್ದವಾದ ದಂಡ, ಧ್ವಜ ದಂಡ, ದಂಡಿಸುವವ, ಸಾಲು, ಒಂದು ಛಂದೋಜಾತಿ, ದಂಡಕಾರಣ್ಯ"[೩] ಎಂದು ಶಬ್ದಕೋಶಗಳಲ್ಲಿ ಶಬ್ದಾರ್ಥವನ್ನು ಹೇಳಲಾಗಿದೆ. ಇದನ್ನು ನೋಡಿದಾಗ ದಂಡಕ ಒಂದು ಛಂದೋಜಾತಿ, ವೃತ್ತ ಜಾತಿ, ಪದ್ಯಜಾತಿಗೆ ಸಂಬಂಧಿಸಿದ್ದು. ಈ ದಂಡಕವನ್ನು ಕುರಿತು ವೃತ್ತ ಜಾತಿ, ಅರ್ಥ-ಸ್ವರೂಪ-ಲಕ್ಷಣ ಹಾಗೂ ವಿಷಯ ವಸ್ತುಗಳ ಪ್ರಯೋಗ ಸಿಗುವುದು. ಇದರ ಕುರಿತು ಸಂಸ್ಕೃತ, ಕನ್ನಡ, ಪ್ರಾಕೃತ ಭಾಷೆಗಳಲ್ಲಿ ಸಿಗುತ್ತವೆ. ಉಕ್ತೆಯಿಂದ ಉತ್ಕೃತಿಯವರೆಗಿನ ೨೬ ವರ್ಗಗಳ ಅಕ್ಷರ ಸಮವೃತ್ತಗಳನ್ನು ಬಿಟ್ಟು ಇತರ ಎಂದರೆ ಅವಕ್ಕಿಂತ ಹೆಚ್ಚಿನ ಅಕ್ಷರ ಸಂಖ್ಯೆಯ ವೃತ್ತಗಳಿವೆ. ಇವುಗಳಲ್ಲಿ ದಂಡಕಗಳೆಂದೂ ಮಾಲಾವೃತ್ತಗಳೆಂದೂ ಎರಡು ಬಗೆಗಳನ್ನು ಲಾಕ್ಷಣಿಕರಲ್ಲಿ ಕೆಲವರು ಕಲ್ಪಿಸಿದ್ದಾರೆ. ಆದರೆ ಭರತ, ಪಿಂಗಳ, ಜಯದೇವ- ಮುಂತಾದವರು ಈ ದೀರ್ಘಾಕ್ಷರ ವೃತ್ತಗಳಲ್ಲಿ ಯಾವ ಬಗೆಗಳನ್ನು ಹೇಳದೆ ಎಲ್ಲವನ್ನೂ ದಂಡಕಗಳೆಂದೇ ಕರೆದಿದ್ದಾರೆ.

"ಇಲ್ಲಿ ಶೇಷಜಾತಿಗಳೆಂದರೆ, ಮೂಲಪ್ರತಿಗಳೆಂದೇ ತಿಳಿಯಬೇಕು" ಎಂದು ಕುಕ್ಕಿಲ ಕೃಷ್ಣಭಟ್ಟರ ಅಭಿಪ್ರಾಯ.[೪] "ಉಳಿದ ದಂಡಕಗಳು ಆದರೆ ಜಯಕೀರ್ತಿ, ಹೇಮಚಂದ್ರ ಸ್ವಯಂಭು, ಕವಿದರ್ಪಣಕಾರ – ಮುಂತಾದವರು ಈ ರೀತಿಯ ದೀರ್ಘಪಾದಗಳ ವೃತ್ತಗಳನ್ನು ಮಾಲಾವೃತ್ತಗಳೆಂದೂ ದಂಡಕಗಳೆಂದೂ ಬೇರೆ ಬೇರೆಯಾಗಿ ಕರೆದು ಅವಕ್ಕೆ ಪ್ರತ್ಯೇಕ ಲಕ್ಷಣ ಹೇಳಿರುವುದರಿಂದ, ಅದು ಸಾಮಾನ್ಯವಾಗಿ ಒಪ್ಪಿಗೆಯಾಗಿರುವುದರಿಂದ"[೫] ಅದನ್ನೇ ಇಲ್ಲಿ ಸಮ್ಮತಿಸಲಾಗಿದೆ.

ಈ ದಂಡಕ ಸಾಹಿತ್ಯದ ಮೂಲ ಹಾಗೂ ಉಗಮವನ್ನು ಕುರಿತು ಅನೇಕ ವಿದ್ವಾಂಸರು ತಮ್ಮದೇ ಆದ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ವಿದ್ವಾಂಸರುಗಳಲ್ಲಿಯೇ ಭಿನ್ನಾಭಿಪ್ರಾಯಗಳಿವೆ.

ಡಾ ಆರ್ ವಿ ಪಾಟೀಲ
ಜೆ.ಎಸ್.ಎಸ್ ಪ್ರಥಮದರ್ಜೆ ಕಾಲೇಜು, ಧಾರವಾಡ



ಎಚ್.ಡಿ. ವೇಲಣಕರ್ ಅವರ ಪ್ರಕಾರ "ಜನಸಾಮಾನ್ಯರಲ್ಲಿ ಪ್ರಚಲಿತವಿದ್ದ ನರ್ತನಗೀತವೇ (Dance Poetry) ದಂಡಕದ ಮೂಲವಾಗಿದೆ" ಎಂದಿದ್ದಾರೆ.

"The Dandak is much different and discloses its origin in popular Dance poetry. The lines of a Dandaka contain the same Aksara Gana repeated several times in succession, after even without them. Thus there can be no doubt that, The Dandaka was originally a Tala Vritta Sung to the accompaniment of a time keeping instrument or of a regular rhythmic dance as in the case of Dandaka in the 5th of the Malati-Madhava of Bhavabhooti. It was sung in the Tala of 8 or 10 Matras according as particular Aksara Gana contained 4 or 5 Matras in it."[೬] ಎಂದು ಹೇಳಿದ್ದಾರೆ. ಮತ್ತೋರ್ವ ವಿದ್ವಾಂಸರಾದ ಕುಕ್ಕಿಲ ಕೃಷ್ಣಭಟ್ಟರ ಪ್ರಕಾರ: "ಇದು ರಗಳೆ ಎಂದು ಕರೆಯುವ ಬಂಧವೇ ಹಿಂದೆ ದಂಡಕವಾಗಿತ್ತೆಂದೂ ಅದು 'ಉದ್ದವಾಗಿದ್ದು' ಎಂಬ ಅರ್ಥದಲ್ಲಿ ಬಂದುದೆಂದೂ ಹೇಳುತ್ತಾರೆ."[೭] ದಂಡಕದ ಲಕ್ಷಣಗಳನ್ನು ಅವಲೋಕಿಸುವುದಾದರೆ ಛಂದಃಶಾಸ್ತ್ರಜ್ಞನ ಪ್ರಕಾರ ೨ ವಿಧಗಳು ಎಂದು ವಿಭಾಗಿಸಿ ಪದ್ಯದಲ್ಲಿರುವ ದಂಡಕಗಳು ವೃತ್ತ ಜಾತಿಗೆ ಸೇರಿದವುಗಳು. ಅನುಭಾವದ ತತ್ತ್ವಮುಕ್ತವಾದ ವಿಷಯವುಳ್ಳವುಗಳಾಗಿವೆ. ಛಂದಸ್ಸಿನ ನಿಯಮಗಳಿಗೆ ತಕ್ಕಂತೆ ಲಯಾಣು ಗಣದಿಂದ ಕೂಡಿದೆ.

"ಜಯ ಜಂಗಮ ಲಿಂಗೇಶ । ಜಯ ಲಿಂಗ ಕಳೇವರ ॥

ಜಯ ಶ್ರೀ ಚೆನ್ನವೀರೇಶ । ಜಯ ಕಾರುಣ್ಯಮೂರ್ತಿಯೆ ॥

ಜಯ ಜಯ ಗುರುದೇವ ಶ್ರೀ ವೀರಶೈವಾಬ್ಧಿ । ಸಂವರ್ಧಿತೋದ್ಭನ್ನಹಾಜ್ಞಾನ ಚಂದ್ರಗಣೇಂದ್ರ ಮಹೇಂದ್ರೈಕ ಸದ್ಭಕ್ತಿ ವಿಜ್ಞಾಪನಂ ಪ್ರೀತಿಯಿಂ ಮನ್ನಿಸೈ ಲಾಲಿಸೈ । ಹೀನ ಸಂಸಾರ ಸಂಯೋಗದಿಂ ಬುದ್ಧಿಯಂ ನೀಗಿ । ದುರ್ಮಾಯ ಪಾಶಂಗಳೊಳ್ಸಿದ್ದು । ಸನ್ಮಾರ್ಗಮಂ ಕಳ್ದು ಜಾಡ್ಯತ್ವದುತ್ಪತ್ತಿ ನಾಶತ್ವದೊಳಾಳ್ದಗಣ್ಯಾಂಡ ಜಸ್ವೇದಜೋದ್ಭಿಜ ಜರಾಯುಜಾವ್ರಾತಮೊಂದೊಂದರೊಳೇಕ । ವಿಂಶನ್ನಹಾಲಕ್ಷ ಸಂಖ್ಯಾ ಪ್ರಮಾಣಂಗಳೊಳಿರ್ದು ಮಾದೇವತಾರಾಧ್ಯ ನಿಮ್ಮಂಘ್ರಿಯಂ ಕಾಣದಾವಾಗ ಕಂಗೆಟ್ಟು । ಶ್ರೀಶೈವಸಾಂಬ್ರಾಜ್ಯ ದೈಶ್ವರ್ಯಮಂಬಿಟ್ಟು । ಯ್ಯೆತಾರದಾಯಾಸ ಜನ್ಮಂಗಳೊಳ್ಬಂದು । ತಿನ್ನಾರದಾ ಹಾರಮಂ ತಿಂದು । ತನ್ಮಧ್ಯದೊಳ್ತೋರ್ಪವೈ ಕಾರದುಸ್ತತ್ವದಿಂ । ರೀತಿಗುಂದುತ್ತ ಮಾಯಾ ಮಹಾಮೋಹ ಭ್ರಾಂತೋದಕಂ ಗೊಂಡು । ಭೋ ದೇವ ನೀವೀ ಕಟ್ಟಿರ್ದ ಸಂಕಲ್ಪನೇ ಭಾರ । ಪೋಪನ್ನ ಸಹಸ್ರ ಕಲ್ಪಂಗಳೊಳ್ಬರ್ಪನ್ನೈ ಶಂಭುವೆ । ನೋಡು ಜಾತ್ಯಂಧಕರಿಗೆ ಕಣ್ಗಳ್ತೊಂಗುಳಂ ಗಂಛ್ರಿಗಳ್ಬಂಜೆ ಸ್ತ್ರೀಯಳ್ಗೆ ಸತ್ಪುತ್ರನಂ ಕಂಡಂತೆ । ನಿರ್ಧನಿಕಂಗೈದೆ ನಿಕ್ಷೇಪದ್ರವ್ಯಂ ಮಹಾಶಕ್ತಿ ಹೀನಂಗೆ ಧೈರ್ಯಂ । ನಪುಂಸಂಗೆ ಬಲ್ವೀರ್ಯ ಮೂಕಂಗೆ ಶಬ್ದಂ ಮಹಾವ್ಯಾಧಿ ಪೀಡಂಗೆ ವೈದ್ಯಂ ಪುರಾಣಾಗಮಾಮ್ನಾಯ ಬಾಹ್ಯಂಗೆ । ಗೌರಂ ಫಲಂ ಪ್ರಾಪ್ತಿಯಾದಂತೆ । ಈ ಮನುಷ್ಯಜನ್ಮ ಸಂಪ್ರಾಪ್ತಿಯಾಯಿತ್ತು । ಸದ್ಭಕ್ತಿ ಸುಜ್ಞಾನ ವೈರಾಗ್ಯ ಬೀಜಕ್ಕೆ ಮಾತಾಗ್ಯಹಂಮೆಂಬ ತಜ್ಞಾನದಿಂದಾನು ಸನ್ಮುಕ್ತಿಯಂ ಸೈದುವೆ ಸಂದ ಮಾಯಾ ವಿಲಾಸಂಗಳಂ ನೀಗುವೆಂ । ಪುಣ್ಯ ಪಾಪಂಗಳಂ ವೇದಿಸುತ್ತಾಗಳುಂ । ಸತ್ಫಲ ಶ್ರೇಣಿ ಧಿಕ್ಕಾರಮಂ ಮಾಡಿ । ಸರ್ವೇಶನಂಘ್ರಿದ್ವಯಾಂ ಭೋಜಮಂ ನೋಡಿ । ತತ್ಸ್ಥಾನದೋಳಿರ್ಪ ಮೆಂಬಷ್ಟದೊಳ್ನಿಚ್ಚ ಮಾಯಂ ಮಹಾ ಮೋಹ ಮೆಚ್ಚುತ್ತಲಲ್ಲಲ್ಲಿಂಗಂ । ವ್ಯಾಪಿಸುತ್ತೀರ್ಪಣ ತ್ರೈವಿಧ ಸ್ನೇಹ ಹೊಸ್ತಣ್ಣು ಮಣ್ಣೆಂಬ । ಮೂರು ಮೂಲೋತ್ಕರ್ಷಮಂ ಮೆಚ್ಚಿಕೊಂಡಟ್ಟ ಸದ್ಭಕ್ತರಂ । ಸಚ್ಚಿದಾತಾರ್ಯರಂ ಶ್ರೇಷ್ಠ ಲಿಂಗಾಂಗರಂ । ನಿಚ್ಚ ಲಿಂಗಾಂಗ ಭಾವಂಗಳಂ ।